ಹೆಸರು ಬದಲಾವಣೆಗಷ್ಟೇ ದೊಕಾಚಿ ಮೇಷ್ಟ್ರು ವೈಚಾರಿಕ ಕ್ರಾಂತಿ ಸೀಮಿತಗೊಂಡಿದ್ದರೆ ಮಠದ ಅಪಗೊಳಾಗಲಿ, ಆಡಳಿತ ಮಂಡಳಿಯಾಗಲಿ ಅಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಹೆಸರು ಬದಲಾವಣೆಯಿಂದ ಆರಂಭಗೊಂಡ ವೈಚಾರಿಕ ಕ್ರಾಂತಿ ಸಮಾಜದಲ್ಲಿ ಮನೆಮಾಡಿದ್ದ ಕೆಲವು ಪದ್ಧತಿಗಳ ಬದಲಾವಣೆಗೆ ವಿಸ್ತರಿಸಿದ್ದು ಮಠದ ಆಡಳಿತ ಮಂಡಳಿಗೆ ನುಂಗಲಾರದ ತುತ್ತಾಯಿತು. ನಡೆದದ್ದಿಷ್ಟು – ಶಾಲೆಯ ಪರಿಸರದಲ್ಲಿನ ಸ್ವಚ್ಛತೆಯನ್ನು ಪರಿಶೀಲಿಸಲೆಂದು ವಿಭಾಗೀಯ ಶಿಕ್ಷಣಾಧಿಕಾರಿಗಳು ಮಠದ ಶಾಲೆಗೆ ಭೇಟಿ ನೀಡಲಿರುವರೆನ್ನುವ ಸುಳಿವು ದೊರೆತದ್ದೆ ಹೆಡ್‌ಮಾಸ್ಟರ್ ರೇವಣ್ಣ ಪಾಟೀಲರು ಇಡೀ ಕಾರ್ಯಕ್ರಮದ ಜವಾಬ್ದಾರಿಯನ್ನು ದೊಕಾಚಿ ಮೇಷ್ಟ್ರು ಹೆಗಲಿಗೇರಿಸಿ ನಿರಾಳರಾದರು. ಹೀಗೆ ದೊಕಾಚಿ ಮೇಷ್ಟ್ರನ್ನು ಹೊಸ ಜವಾಬ್ದಾರಿಗೆ ಒಳಗಾಗಿಸುವ ಈ ಯೋಜನೆಯು ಅವರ ವೈಚಾರಿಕ ಕ್ರಾಂತಿಗೆ ಒಂದಷ್ಟು ಹಿನ್ನಡೆ ಒದಗಿಸಬೇಕೆನ್ನುವ ಮಠದ ಆಡಳಿತ ಮಂಡಳಿಯ ಪಿತೂರಿಯ ಭಾಗವಾಗಿದೆ ಎನ್ನುವ ಗುಮಾನಿ ಕೆಲವರಲ್ಲಿ ಬರದೇ ಇರಲಿಲ್ಲ. ವಿಭಾಗೀಯ ಶಿಕ್ಷಣಾಧಿಕಾರಿಗಳ ಭೇಟಿಗೆ ಇನ್ನು ಹದಿನೈದು ದಿನಗಳಿರುವಾಗಲೇ ದೊಕಾಚಿ ಮೇಷ್ಟ್ರು ನೇತೃತ್ವದಲ್ಲಿ ಇಡೀ ಶಾಲೆಯ ಮಕ್ಕಳೆಲ್ಲ ಒಂದಾಗಿ ಗೋಡೆಗಳಿಗೆ ಸುಣ್ಣ ಬಣ್ಣ ಬಳಿದು, ಕಸಕಡ್ಡಿ ಗುಡಿಸಿ, ತಳಿರು ತೋರಣಗಳಿಂದ ಶಾಲೆಯನ್ನು ನವವಧುವಿನಂತೆ ಸಿಂಗರಿಸಿದರು. ಶಾಲೆಯ ಸ್ವಚ್ಛತಾ ಕಾರ್ಯಕ್ರಮದ ಸಿದ್ಧತೆಯಲ್ಲಿರುವಾಗಲೇ ಅಸ್ತವ್ಯಸ್ತವಾಗಿ ತಲೆಗೂದಲು ಬೆಳೆದು ನಿಂತ ಕೇರಿಯ ಮಕ್ಕಳು ಮೇಷ್ಟ್ರು ಎದುರಿಗೆ ಬರುವುದಕ್ಕೂ ಮೇಷ್ಟ್ರು ಗಮನ ಅವುಗಳ ತಲೆಯ ಕಡೆ ಹರಿಯುವುದಕ್ಕೂ ಸರಿಹೋಯಿತು. ತಮ್ಮ ಕೆಲಸದ ವಿರಾಮದ ನಡುವೆ ಅವರನ್ನೆಲ್ಲ ಹತ್ತಿರ ಕರೆದು ಮೇಷ್ಟ್ರು, 'ಯಾಕ್ರೋ ಕೂದಲು ಈ ಪರಿ ಬೆಳೆಸಿದ್ದಿರಿ. ಹೇನಾದರೆ ನಿಮಗೇ ಕಷ್ಟ ನೋಡಿ' ಎಂದು ವಿಚಾರಿಸಿಕೊಂಡರು. 'ಏನ್ಮಾಡೊದು ಸರ್, ಪ್ಯಾಟಿಕಡೆ ಹೋಗ್ದೆ ಆರು ತಿಂಗಳಾಯ್ತು' ಎಂದು ಮಕ್ಕಳು ತಮ್ಮ ಅಸಹಾಯಕತೆ ತೋಡಿಕೊಂಡವು. ಈ ವಿಷಯವಾಗಿ ಕ್ಷೌರಿಕರ ಅಪ್ಪಣ್ಣನನ್ನು ಕರೆದು ವಿಚಾರಿಸಿದಾಗ, 'ಲಾಗಾಯ್ತಿನಿಂದಲೂ ಕೇರಿಯವರಿಗೆ ಕ್ಷೌರ ಮಾಡುವ ಪದ್ಧತಿ ಊರಲಿಲ್ಲವೆಂದೂ, ತಾನೇನಾದರೂ ಸಂಪ್ರದಾಯ ಮುರಿದಲ್ಲಿ ಊರಿನವರು ತನ್ನನ್ನು ಬಹಿಷ್ಕರಿಸುವರೆಂದು' ಅಳಲು ತೋಡಿಕೊಂಡ. ಅಪ್ಪಣ್ಣನ ಮನಪರಿವರ್ತಿಸುವಲ್ಲಿ ದೊಕಾಚಿ ಮೇಷ್ಟ್ರು ಮಾಡಿದ ಪ್ರಯತ್ನ ಫಲಕಾಣಲಿಲ್ಲ. 'ಮೇಷ್ಟ್ರೇ ನಿಮಗೇನೋ ಸರ್ಕಾರದವರು ಪಗಾರ ಕೊಡ್ತಾರ. ನಾನು ಊರನ್ನೇ ನಂಬಿದ್ದೀನಿ. ದಯವಿಟ್ಟು ಬಡವನ ಹೊಟ್ಟಿ ಮ್ಯಾಗ ಹೊಡಿಬ್ಯಾಡರಿ' ಅಪ್ಪಣ್ಣ ಕೈಮುಗಿದು ಬೇಡಿಕೊಂಡ. ಇಲ್ಲಿ ಯಾವುದೂ ಸುಲಭವಾಗಿ ಬದಲಾಗೊಲ್ಲ, ಅದಕ್ಕೆ ಕ್ರಾಂತಿಯೇ ಮದ್ದು ಎಂದು ಭಾವಿಸಿದ ದೊಕಾಚಿ ಮೇಷ್ಟ್ರಿಗೆ ಸಮಸ್ಯೆ ಜಟಿಲವಾಗಿದೆ ಅನಿಸಿ ಈ ಸಮಸ್ಯೆಯನ್ನು ಸರ್ಕಾರಿ ಅಧಿಕಾರಿಗಳ ಸಮ್ಮುಖದಲ್ಲೇ ಅನಾವರಣಗೊಳಿಸಬೇಕೆಂದು ನಿಶ್ಚಯಿಸಿ ಅದಕ್ಕೆ ಅಗತ್ಯವಾದ ಯೋಜನೆಯನ್ನು ರೂಪಿಸಿದರು. ಹೆಡ್‌ಮಾಸ್ಟರ್ ರೇವಣ್ಣ ಪಾಟೀಲ ನಗರದಿಂದ ಬಿ.ಇ.ಓ ಸಾಹೇಬರ ಜೊತೆ ಬರುವುದೆಂದು ಮತ್ತು ಇಲ್ಲಿನ ಕಾರ್ಯಕ್ರಮದ ಸಿದ್ಧತೆಯನ್ನು ದೊಕಾಚಿ ಮೇಷ್ಟ್ರು ಖುದ್ದು ಎದುರು ನಿಂತು ನೋಡಿಕೊಳ್ಳುವುದೆಂದು ಮೊದಲೆ ನಿರ್ಧಾರವಾಗಿದ್ದರಿಂದ ಮಠದ ಆಡಳಿತ ಮಂಡಳಿಗಾಗಲಿ, ಶಾಲೆಯ ಇತರ ಶಿಕ್ಷಕರಿಗಾಗಲಿ ಕೇರಿಯ ಮಕ್ಕಳ ಕ್ಷೌರದ ಸಮಸ್ಯೆ ಕುರಿತು ದೊಕಾಚಿ ಮೇಷ್ಟ್ರು ರೂಪಿಸಿದ ಯೋಜನೆಯ ಸಂಚು ಗಮನಕ್ಕೆ ಬರಲಿಲ್ಲ.

ಕಾರ್ಯಕ್ರಮದ ದಿನ ಶಾಲೆಯ ಆವರಣವನ್ನು ಕಂಪೌಂಡ್ ಗೇಟ್ ಮೂಲಕ ಬಿ.ಇ.ಓ ಸಾಹೇಬರು ಮೊದಲು ಪ್ರವೇಶಿಸುವರೆಂದು, ಅವರ ಹಿಂದೆ ಮಠದ ಅಪಗೊಳು, ಆಡಳಿತ ಮಂಡಳಿ ಸದಸ್ಯರು, ಹೆಡ್‌ಮಾಸ್ಟರ್ ರೇವಣ್ಣ ಹಾಗೂ ಉಳಿದ ಶಿಕ್ಷಕರು ಬರುವುದೆಂದು ಪೂರ್ವನಿರ್ಧರಿತವಾಗಿತ್ತು. ಬಿ.ಇ.ಓ ಸಾಹೇಬರು ಮೊದಲು ಮಠಕ್ಕೆ ಭೇಟಿ ನೀಡಿ, ಹಿಂದಿನ ಅಪಗೊಳ ಗದ್ದುಗೆಗೆ ನಮಸ್ಕರಿಸಿ, ಈಗಿನ